## 2017 ಕ.ತೀ.ವ 389

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ

## ಶ್ರೀನಿವಾಸ ಕನ್‌ಸ್ಟ್ರಕ್ಷನ್ ಮತ್ತು ಇತರರು –ವಿರುದ್ಧ– ಮೈಸೂರು ಚಾಮರಾಜನಗರ ಜಿಲ್ಲಾ ಶಾಲಾ ಶಿಕ್ಷಕರ ವಸತಿ ನಿರ್ಮಾಣ ಸಹಕಾರಿ ಸಂಘ ಮತ್ತು ಇತರರು*

1996ರ ರಾಜಿ ಮತ್ತು ಸಂಧಾನ ಕಾಯಿದೆ ಕಲಂ 11 (5) & (6) ರಡಿಯಲ್ಲಿ ಸಿವಿಲ್ ಸಂಕೀರ್ಣ ಅರ್ಜಿ.

ಸಂಧಾನಕಾರರನ್ನು ಸೂಚಿಸುವಂತೆ ಎದುರುದಾರರಿಗೆ ನಿರ್ದೇಶನ ಕೋರಿ, ತಪ್ಪಿದಲ್ಲಿ ತಾವು ಸೂಚಿಸುವ ಸಂಧಾನಕಾರರನ್ನು ಎರಡನೇ ಸಂಧಾನಕಾರರಾಗಿ ನೇಮಿಸುವಂತೆ ಕೋರಿ ಸದರಿ ಅರ್ಜಿ.

ಅರ್ಜಿದಾರರು ಕಾಲ ಪರಿಮಿತಿ ಕಾಯಿದೆ ಕಲಂ 14ನ್ನು ಅವಲಂಬಿಸಿ ಅವರ ಕ್ಲೇಮನ್ನು ರಕ್ಷಿಸುವಂತೆ ಕೋರಿರುತ್ತಾರೆ. ಹಾಗೆಯೇ ಕಾಲ ಪರಿಮಿತಿ ಕಾಯಿದೆ ಕಲಂ 55 ಮತ್ತು 113 ರಡಿಯಲ್ಲಿ ಸಮಯವನ್ನು ನಿಗದಿಪಡಿಸಬೇಕಾಗಿರುತ್ತದೆಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 2009 ಎಸ್‌ಸಿ(ಎಸ್‌ಯುಪಿಪಿ) 1281 ಗುಲ್ಬರ್ಗ ವಿಶ್ವವಿದ್ಯಾಲಯ –ವಿರುದ್ಧ– ಮಲ್ಲಿಕಾರ್ಜುನ್ ಎಸ್.ಕೊಡಗಲಿ ಮತ್ತು ಇನ್ನೊಬ್ಬರು* | *(ಉಲ್ಲೇ) 5* |
| *2. (2008)7 ಎಸ್‌ಸಿ 169 ಕನ್ಸಾಲಿಡೇಟೆಡ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ –ವಿರುದ್ಧ– ಪ್ರಿನ್ಸಿಪಲ್ ಸೆಕ್ರೆಟರಿ, ಇರಿಗೇಷನ್ ಡಿಪಾರ್ಟ್‌ಮೆಂಟ್ ಅಂಡ್ ಅದರ್ಸ್* | *(ಉಲ್ಲೇ) 5* |

*ಸಿವಿಲ್ ಸಂಕೀರ್ಣ ಅರ್ಜಿ ಸಂಖ್ಯೆ: 168/2014, ದಿನಾಂಕ: 20ನೇ ಸೆಪ್ಟೆಂಬರ್, 2016.

*3. (1993)4 ಎಸ್‌ಸಿಸಿ 338]*
*ಪಂಚು ಗೋಪಾಲ್ ಬಫಸ್ –ವಿರುದ್ಧ–*
*ಬೋರ್ಡ್ ಆಫ್ ಟ್ರಸ್ಟೀಸ್ ಫಾರ್ ಪೋರ್ಟ್*
*ಆಫ್ ಕಲ್ಕತ್ತಾ (ಉಲ್ಲೇ) 6*
*4. (2005)8 ಎಸ್‌ಸಿಸಿ 618*
*ಎಸ್‌ಬಿಪಿ ಮತ್ತು ಕಂ. –ವಿರುದ್ಧ–*
*ಪಟೇಲ್ ಇಂಜಿನಿಯರಿಂಗ್ ಲಿ. ಮತ್ತು ಮತ್ತೊಬ್ಬರು (ಉಲ್ಲೇ) 8*
*5. (2011) ಎಸ್‌ಸಿಸಿ 507*
*ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್*
*–ವಿರುದ್ಧ– ಎಸ್‌ಪಿಎಸ್ ಇಂಜಿನಿಯರಿಂಗ್ ಲಿಮಿಟೆಡ್ (ಉಲ್ಲೇ) 9*

ಅರ್ಜಿದಾರರ ಪರ: ಶ್ರೀ ಶೌರಿ ಹೆಚ್.ಆರ್. ವಕೀಲರ ಪರವಾಗಿ.
ಶ್ರೀ ಧ್ಯಾನ್ ಚಿನ್ನಪ್ಪ, ಹಿರಿಯ ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಬಿ.ಎಂ. ಅರುಣ್, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ :**

ಪಕ್ಷಕಾರರ ನಡುವೆ ಒಪ್ಪಂದ ಹಾಗೂ ತರುವಾಯದ ಪೂರಕ ಒಪ್ಪಂದಗಳಡಿಯಲ್ಲಿ ಉದ್ಭವಿಸಿರುವ ವಿವಾದಗಳನ್ನು ಬಗೆಹರಿಸಲು 05.09.1988ರಂದಿನ ಒಪ್ಪಂದದ 21ನೇ ಖಂಡದಡಿಯಲ್ಲಿ ಉಪಬಂಧಿಸಲಾದಂತೆ ಮಧ್ಯಸ್ಥಿಕೆಗಾರರನ್ನು ನೇಮಕ ಮಾಡಬೇಕೆಂದು ಕೋರಿ ರಾಜಿ ಹಾಗೂ ಸಂಧಾನ ಅಧಿನಿಯಮ, 1996 (ಸಂಕ್ಷಿಪ್ತವಾಗಿ ಮತ್ತು ರಾಜಿ ಮತ್ತು ಸಂಧಾನ ಅಧಿನಿಯಮ ಎಂದು ಕರೆಯಲಾಗಿದೆ)ರ 11(5)ನೇ ಪ್ರಕರಣದಡಿಯಲ್ಲಿ ಈ ಅರ್ಜಿಯನ್ನು ಅರ್ಜಿದಾರರು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.

2. ಪ್ರತ್ಯರ್ಜಿದಾರರು, ಅರ್ಜಿದಾರರು ಮಾಡಿರುವ ವಿವಾದದಲ್ಲಿ ಯಾವುದೇ ಹುರುಳಿಲ್ಲವೆಂದು ವಾದಿಸಿ, ಅರ್ಜಿಯಲ್ಲಿ ಮಾಡಿರುವ ಕೋರಿಕೆಯನ್ನು ವಿರೋಧಿಸಿ ವಿವರಣಾತ್ಮಕ ಆಕ್ಷೇಪಣಾ ವಿವರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 (ಸಂಕ್ಷಿಪ್ತವಾಗಿ ಕೆ.ಸಿ.ಎಸ್. ಅಧಿನಿಯಮ ಎಂದು ಕರೆಯಲಾಗಿರುತ್ತದೆ) ರಡಿಯಲ್ಲಿ ಅರ್ಜಿದಾರರು ಪಾಲಿಸಲು ವಿಫಲರಾಗಿರುವ ನಡಾವಳಿಗಳಿಗೆ ಉಲ್ಲೇಖವನ್ನು ಮಾಡಲಾಗಿರುತ್ತದೆ. ಆದಾಗ್ಯೂ, ವಿಳಂಬಕ್ಕೆ ಸಂಬಂಧಿಸಿದಂತೆ ಆರಂಭಿಕ ಆಕ್ಷೇಪಣೆಯನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧದಲ್ಲಿ, ಒಪ್ಪಂದದ ದಿನಾಂಕವು 05.09.1988 ಆಗಿರುತ್ತದೆ ಹಾಗೂ ನೋಟೀಸನ್ನು ಹೊರಡಿಸಿದ ದಿನಾಂಕವು 22.06.1996 ಆಗಿರುತ್ತದೆ. ಆದರೆ ಪ್ರಸ್ತುತ ಅರ್ಜಿಯನ್ನು 06.09.2014ರಂದು ಸಲ್ಲಿಸಲಾಗಿರುತ್ತದೆ. ವಿಳಂಬದ ಆಧಾರದ ಮೇಲೆ ಮಾತ್ರ ಪ್ರಸ್ತುತ ಅರ್ಜಿಯನ್ನು ತಿರಸ್ಕರಿಸಬೇಕೆಂಬುದು ಸದ್ಯದ ವಾದವಾಗಿರುತ್ತದೆ.

3. ಮೇಲಿನದರ ಹಿನ್ನೆಲೆಯಲ್ಲಿ, ನಾನು ಅರ್ಜಿದಾರರ ಪರ ಮಾನ್ಯ ಹಿರಿಯ ವಕೀಲರಾದ ಶ್ರೀ ಧ್ಯಾನ್ ಚಿನ್ನಪ್ಪ ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಬಿ.ಎಂ. ಅರುಣ್‌ರವರ ವಾದವನ್ನು ಆಲಿಸಿ, ಅರ್ಜಿಯನ್ನು ಪರಿಶೀಲಿಸಿರುತ್ತೇನೆ.

4. ವಾದಿಸಿದ ವಾದ–ವಿವಾದಗಳ ಸದರಿ ಸ್ವರೂಪದಿಂದ 05.09.1988ನೇ ದಿನಾಂಕದ ಒಪ್ಪಂದವನ್ನು ಇಲ್ಲಿನ ಪಕ್ಷಕಾರರ ನಡುವೆ ಮಾಡಿಕೊಳ್ಳಲಾಗಿದ್ದು, 21ನೇ ಖಂಡದ ಮೂಲಕ ಮಾಡಿಕೊಂಡ ಸದರಿ ಒಪ್ಪಂದವು, ಮಧ್ಯಸ್ಥಿಕೆಯು ಗಂಭೀರ ಸ್ವರೂಪದ ವಿವಾದವಾಗಿರುವುದಿಲ್ಲವೆಂದು ಹೇಳುವ ಮೂಲಕ ವಿವಾದಗಳ ವಿಶ್ಲೇಷಣೆಗೆ ಅವಕಾಶ ಕಲ್ಪಿಸುತ್ತದೆಂಬುದು ವಾಸ್ತವಾಂಶವಾಗಿರುತ್ತದೆಂಬುದು ತಿಳಿದುಬರುತ್ತದೆ. ಒಪ್ಪಂದಕ್ಕೆ ಸಂಬಂಧಿಸಿದ ಪಕ್ಷಕಾರರ ನಡುವೆ ಬಿನ್ನಾಭಿಪ್ರಾಯಗಳು ಉದ್ಭವಿಸಿದರೂ ಕೂಡ, ಸದರಿ ವಿಷಯವು, ವಸತಿ ಲೇಔಟ್‌ನ ಅಭಿವೃದ್ಧಿಗೆ ಸಂಬಂಧಿಸಿದಂತೆ ನಿರ್ವಹಿಸಿದ ಕಾರ್ಯಕಾರಿಗೆ ಸಂಬಂಧಿಸಿದಂತೆ ಹಣವನ್ನು ಸಂದಾಯ ಮಾಡುವಂತೆ ಅರ್ಜಿದಾರರು ತಗಾದೆ ಮಾಡಿದರಿಂದ ಕೂಡ ವಿವಾದ ಆಗಿರುವುದಿಲ್ಲ. ಆದರೆ ಪ್ರತ್ಯರ್ಜಿದಾರರು ಇದನ್ನೇ ವಿವಾದ ಮಾಡಿ, ವಾಸ್ತವವಾಗಿ ಅರ್ಜಿದಾರರು

ನಿಗದಿತ ಸಮಯಕ್ಕೆ ಕಾರ್ಯ ನಿರ್ವಹಿಸದೆ ಲೇಔಟ್ ಅನ್ನು ಪೂರ್ಣಗೊಳಿಸದೆ, ಪ್ರತ್ಯರ್ಜಿದಾರ ಸೊಸೈಟಿಯ ಸದಸ್ಯರಿಗೆ ವಸತಿ ನಿವೇಶನಗಳನ್ನು ನೀಡಲು ತೊಂದರೆಯಾಗಿರುವುದೆಂದೂ ಸಹ ವಾದಿಸಿರುತ್ತಾರೆ. ಅಲ್ಲದೆ ಒಪ್ಪಂದವನ್ನು ರದ್ದುಪಡಿಸಬೇಕೆಂಬುದೂ ಸಹ ಪ್ರತ್ಯರ್ಜಿದಾರರ ವಾದವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ, ಸಾಮಾನ್ಯ ಸಂದರ್ಭಗಳಲ್ಲಿ ಮಧ್ಯಸ್ಥಿಕೆದಾರನನ್ನು ನೇಮಕ ಮಾಡಿ, ಅದರಲ್ಲಿನ ಪರಿಗಣನೆಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳನ್ನು ಅವರಿಗೆ ವಹಿಸುವುದನ್ನು ಹೊರತುಪಡಿಸಿದಂತೆ ಅರ್ಜಿಯನ್ನು ಬೇರ್‍ಯಾವುದೇ ಸಂದರ್ಭಗಳಿಗೂ ಅಗತ್ಯಪಡಿಸುವಂತಿಲ್ಲ. ಆದಾಗ್ಯೂ, ಪ್ರಸ್ತುತ ಅರ್ಜಿಯಲ್ಲಿ ವಿಳಂಬದ ಪ್ರಶ್ನೆಯನ್ನು ತೀಕ್ಷ್ಣವಾಗಿ ಎತ್ತಿರುವುದರಿಂದ, ವಿಷಯದ ಆ ಆಯಾಮವನ್ನು ಪರಿಗಣಿಸಬೇಕಾದ ಅಗತ್ಯವಿದ್ದು, ಇದರಿಂದ ಮಾನ್ಯ ಹಿರಿಯ ನ್ಯಾಯವಾದಿಗಳು ಹಾಗೂ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಯು ಉಲ್ಲೇಖಿಸಿದ ಕಾನೂನು ಸ್ಥಿತಿಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಸರಿಯಾದ ದೃಷ್ಟಿಕೋನವನ್ನು ಇಟ್ಟುಕೊಂಡಂತಾಗುತ್ತದೆ. ಆ ತರುವಾಯ, ಒಂದು ತೀರ್ಮಾನಕ್ಕೆ ಬರಬಹುದಾಗಿರುತ್ತದೆ.

5. ಕೆ.ಸಿ.ಎಸ್. ಅಧಿನಿಯಮದ 70ನೇ ಪ್ರಕರಣದಡಿಯಲ್ಲಿ ಹಾಗೂ ಅದರಲ್ಲಿ ಹೊರಡಿಸಿದ 02.08.2008 (ಅನುಬಂಧ–ಎಲ್) ರಂದಿನ ಆದೇಶ ಅಲ್ಲದೆ ಕರ್ನಾಟಕ ಅಪೀಲು ನ್ಯಾಯಾಧಿಕರಣ (ಸಂಕ್ಷಿಪ್ತವಾಗಿ ಕೆಎಟಿ ಎಂದು ಕರೆಯಲಾಗುತ್ತದೆ)ವು ಅಪೀಲಿನಲ್ಲಿ ಹೊರಡಿಸಿದ 29.08.2013ರ ಆದೇಶಗಳಡಿಯಲ್ಲಿ ಅರ್ಜಿದಾರರು ಆರಂಭಿಸಲಾದ ವ್ಯವಹರಣೆಗಳನ್ನು ಉಲ್ಲೇಖಿಸುವ ಹಿನ್ನೆಲೆಯಲ್ಲಿ ಅರ್ಜಿದಾರರ ಪರ ಮಾನ್ಯ ಹಿರಿಯ ವಕೀಲರು ಅರ್ಜಿದಾರರು, ಬೇರೆ ಬೇರೆ ವೇದಿಕೆಗಳ ಎದುರು ನಡಾವಳಿಗಳನ್ನು ಮುಂದುವರೆಸಿರುತ್ತಾರೆ. ಪ್ರಸ್ತುತ ನಡಾವಳಿಗಳನ್ನು ಮುಂದುವರೆಸುವ ಅವಶ್ಯಕತೆಗೆ ಮಧ್ಯಸ್ಥಿಕೆಯನ್ನು ಕೋರುವ ಸಂದರ್ಭವು, ಪ್ರತ್ಯರ್ಜಿದಾರ ಸಂಘದ ಸದಸ್ಯರಾಗಿರದ ಅರ್ಜಿದಾರರು ಕೆಸಿಎಸ್ ಅಧಿನಿಯಮದಡಿಯಲ್ಲಿ ವಿವಾದವನ್ನು ಮುಂದುವರೆಸುವಂತಿಲ್ಲವೆಂದು ಕೆ.ಎ.ಟಿ.ಯು ಅಭಿಪ್ರಾಯಪಟ್ಟಿದ್ದರಿಂದ ಮಾತ್ರ ಉದ್ಭವವಾಗಿರುತ್ತದೆಂದು ವಾದಿಸಿರುತ್ತಾರೆ. ಹಾಗಾಗಿ, ಕಾಲಪರಿಮಿತಿ ಅಧಿನಿಯಮದ 14ನೇ ಪ್ರಕರಣವು ಅರ್ಜಿದಾರರ ನೆರವಿಗೆ ಬರುತ್ತದೆಂದು ಹಾಗೂ ಈ ಸಂಬಂಧದಲ್ಲಿ

***ಗುಲ್ಬರ್ಗ ವಿಶ್ವವಿದ್ಯಾಲಯ -ವಿರುದ್ಧ- ಮಲ್ಲಿಕಾರ್ಜುನ ಎಸ್.ಕೊಡಗಲಿ ಮತ್ತು ಇತರರು***[1], ಪ್ರಕರಣದಲ್ಲಿನ ತೀರ್ಪನ್ನು ಉದಾಹರಿಸಲಾಗಿರುತ್ತದೆ.

6. ಆದಾಗ್ಯೂ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಕೆಸಿಎಸ್ ಅಧಿನಿಯಮದಡಿಯಲ್ಲಿನ ನಡಾವಳಿಗಳನ್ನು ಸದರಿ ನಡಾವಳಿಗಳಿಗೆ ಪಕ್ಷಕಾರರಾಗಿರುವ ಅರ್ಜಿದಾರ – ಸಂಸ್ಥೆ ವಾಸ್ತವವಾಗಿ ಅನುಸರಿಸಲಾಗಿಲ್ಲ. ಇದರಿಂದ ಅರ್ಜಿದಾರರು ಕಾಲಪರಿಮಿತಿ ಅಧಿನಿಯಮದ 14ನೇ ಪ್ರಕರಣದ ಸೌಲಭ್ಯವನ್ನು ಕ್ಲೇಮು ಮಾಡುವಂತಿರುವುದಿಲ್ಲ. ಆದ್ದರಿಂದ, ಕಾಲ ಪರಿಮಿತಿ ಅಧಿನಿಯಮದ ಅನುಸೂಚಿಗೆ 55 ಅಥವಾ 113ನೇ ಅನುಚ್ಛೇದಗಳಡಿಯಲ್ಲಿ ಪರಿಮಿತಿಯು ಉಪಬಂಧ ಕಲ್ಪಿಸಲಾಗಿದೆಯೆಂದು ವಾದಿಸಿರುತ್ತಾರೆ. ಹಾಗಿದ್ದಲ್ಲಿ, ವಾದಕ್ಕೆ ಕಾರಣವಾಗಿರುವ ಅರ್ಜಿಯನ್ನು ವಜಾಗೊಳಿಸಬೇಕಾಗುತ್ತದೆ. ಮಾನ್ಯ ನ್ಯಾಯವಾದಿಗಳು, ***ಕನ್ಸಾಲಿಡೇಟೆಡ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ -ವಿರುದ್ಧ- ಪ್ರಿನ್ಸಿಪಲ್ ಸೆಕ್ರೆಟರಿ, ಇರಿಗೇಷನ್ ಡಿಪಾರ್ಟ್‌ಮೆಂಟ್ ಅಂಡ್ ಅದರ್ಸ್***[2], ಪ್ರಕರಣದಲ್ಲಿನ ಹಾಗೂ ***ಪಂಚು ಗೋಪಾಲ್ ಬಫಸ್ -ವಿರುದ್ಧ- ಬೋರ್ಡ್ ಆಫ್ ಟ್ರಸ್ಟೀಸ್ ಫಾರ್ ಪೋರ್ಟ್ ಆಫ್ ಕಲ್ಕತ್ತಾ***[3], ಪ್ರಕರಣದಲ್ಲಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ.

7. ಇಲ್ಲಿ ವಾದಿಸಿದ ವಾದಗಳ ಹಿನ್ನೆಲೆಯಲ್ಲಿ ಉದಾಹರಿಸಿದ ತೀರ್ಪುಗಳನ್ನು ಪರಿಶೀಲಿಸಿದಾಗ, ಕಾಲ ಪರಿಮಿತಿ ಅಧಿನಿಯಮದ ಪ್ರಕರಣದ ಅನ್ವಯಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಅಂತಿಮವಾಗಿ ಪ್ರಸ್ತುತ ಪ್ರಕರಣದಲ್ಲಿ ಮಧ್ಯಸ್ಥಿಕೆದಾರನನ್ನು ನೇಮಕ ಮಾಡಿಕೊಳ್ಳುವಂಥ ತೀರ್ಮಾನವನ್ನು ತೆಗೆದುಕೊಂಡಲ್ಲಿ, ಆ ಸಮಯದಲ್ಲಿ ಕ್ಲೇಮನ್ನು ನಿಷೇಧಿಸಬೇಕೆಂದು ನಿರ್ಧರಿಸಬೇಕಾದ ಪರಿಗಣನೆಗೆ ಸಂಬಂಧಿಸಿದಂತೆ ಪರಸ್ಪರ ವಾದ – ವಿವಾದಗಳು ಉದ್ಭವವಾದಾಗ ಪರ್ಯಾಯ ನಡಾವಳಿಗಳಲ್ಲಿ ಕಳೆದುಹೋದ ಸಮಯವನ್ನು ಹೊರತುಪಡಿಸಬೇಕು ಅಥವಾ ಅನ್ಯಥಾ ನಡಾವಳಿಗಳಲ್ಲಿನ ದೃಢೋಕ್ತಿಗಳನ್ನು ಅಗತ್ಯಪಡಿಸಬೇಕೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ. ಅಂಥ ಸಂದರ್ಭದಲ್ಲಿ, ಮೇಲೆ ಸೂಚಿಸಲಾದಂಥ ಆಯಾಮಗಳ ಕುರಿತಾದ ವಾದಗಳು

1. ಎಐಆರ್ 2009 ಎಸ್‌ಸಿ(ಎಸ್‌ಯುಪಿಪಿ) 1281
2. (2008)7 ಎಸ್‌ಸಿಸಿ 169
3. (1993) 4 ಎಸ್‌ಸಿಸಿ 338

ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೈಗೊಂಡ ತೀರ್ಮಾನವು, ಕಾಲ ಪರಿಮಿತಿಯಿಂದ ನಿಷೇಧವಾಗಿರುವಂಥ ಆಧಾರದ ಮೇಲೆ ಕ್ಲೇಮನ್ನು ನಿಷೇಧಿಸಬೇಕೆ ಅಥವಾ ಪರ್ಯಾಯ ನಡಾವಳಿಗಳು ಅಂಥ ಪರಿಸ್ಥಿತಿಯನ್ನು ಉಳಿಸಿಕೊಳ್ಳಬೇಕೆ ಎಂದು ನಿರ್ಧಾರ ಕೈಗೊಳ್ಳಲು ಮಧ್ಯಸ್ಥಿಕೆಗಾರನ ಪರಿಗಣನೆಗಾಗಿಯೇ ಈವರೆಗೂ ಮುಕ್ತವಾಗಿಡಲಾಗಿರುತ್ತದೆ. ಹಾಗಾಗಿ ಆ ಆಯಾಮವನ್ನು ಮುಕ್ತವಾಗಿಸುತ್ತಾ ಪರಿಗಣಿಸಬೇಕಾದಂಥ ವಿವಾದಾಂಶವೆಂದರೆ, ಮಧ್ಯಸ್ಥಿಕೆಗಾರರ ನೇಮಕಾತಿಯನ್ನು ಕೋರಿರುವ ಮಟ್ಟಿಗೆ ಕೂಡ ಅರ್ಜಿದಾರರು ತಮ್ಮ ಹಕ್ಕನ್ನು ಕಳೆದುಕೊಳ್ಳಬೇಕೆ; ನಿರಾಕರಿಸಬೇಕಾದ ಅವರ ಕ್ಲೇಮನ್ನು ಅಂಗೀಕರಿಸಬೇಕೆ ಹಾಗೂ 1988ನೇ ವರ್ಷದ ಒಪ್ಪಂದಕ್ಕೆ ಸಂಬಂಧಿಸಿದಂತೆ ನೋಟೀಸನ್ನು ನೀಡುವ ಮೂಲಕ 1996ನೇ ವರ್ಷದಲ್ಲಿ ಪ್ರಸ್ತಾಪಿಸಿದ ಕ್ಲೇಮಿಗೆ ಸಂಬಂಧಿಸಿದಂತೆ 2014ನೇ ವರ್ಷದಲ್ಲಿ ಮಾತ್ರ ಅವರಿಗೆ ಈ ಬಗ್ಗೆ ತಿಳುವಳಿಕೆ ಮೂಡಿತೆ ಮತ್ತು ಆ ಸಂದರ್ಭದಲ್ಲಿ ಎ ಮತ್ತು ಸಿ ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ಅರ್ಜಿಯನ್ನು ಪರಿಗಣಿಸಿ, ಮಧ್ಯಸ್ಥಿಕೆಗಾರನನ್ನು ನೇಮಕ ಮಾಡಿಕೊಳ್ಳಬಹುದೆ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ.

8. ಈ ಸಂಬಂಧದಲ್ಲಿನ ಕಾನೂನು ಸ್ಥಿತಿಗತಿಯನ್ನು ನಿರ್ಧರಿಸಬೇಕಾದ ಹಿನ್ನೆಲೆಯಲ್ಲಿ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಉದಾಹರಿಸಿದ ತೀರ್ಪುಗಳನ್ನು ಗಮನಿಸಬೇಕಾಗುತ್ತದೆ. ***ಎಸ್‌ಬಿಪಿ ಮತ್ತು ಕಂ. –ವಿರುದ್ಧ– ಪಟೇಲ್ ಇಂಜಿನಿಯರಿಂಗ್ ಲಿ. ಮತ್ತು ಮತ್ತೊಬ್ಬರು*** [4], ಪ್ರಕರಣದಲ್ಲಿ, ಸದರಿ ಸ್ಥಿತಿಗತಿಯನ್ನು ಈ ಮುಂದಿನಂತೆ ವಿವರಿಸಲಾಗಿರುತ್ತದೆ.

> *" ಅಧಿನಿಯಮದ 11ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯ ವಿಷಯ ವಾಸ್ತವವಾಗಿ ಈ ಹಂತದಲ್ಲಿ ಮುಖ್ಯ ನ್ಯಾಯಮೂರ್ತಿಗಳು ಏನನ್ನೂ ನಿರ್ಧರಿಸುತ್ತಾರೆಂಬುದನ್ನು ವಿವರಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ನ್ಯಾಯಮೂರ್ತಿಗಳು, ಪಕ್ಷಕಾರನು ಸ್ವಪ್ರೇರಣೆಯಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ಅಪೀಲು*

4. (2009)8 ಎಸ್‌ಸಿಸಿ 618

*ಅರ್ಜಿ ಸಲ್ಲಿಸಿರುವುದು ಸರಿಯಾದುದೇ ಎಂಬುದನ್ನು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿಯೇ ನಿರ್ಧರಿಸಬೇಕಾದುದು ಸ್ಪಷ್ಟವಾದುದೇ ಆಗಿರುತ್ತದೆ. ಇವರು, ಅಧಿನಿಯಮದಲ್ಲಿ ಪರಿಭಾಷಿಸಿದಂತೆ ಮಧ್ಯಸ್ಥಿಕೆ ಒಪ್ಪಂದವು ಇದೆಯೇ ಹಾಗೂ ಇವರ ಮುಂದೆ ಕೋರಿಕೆ ಸಲ್ಲಿಸಿರುವಂಥ ವ್ಯಕ್ತಿಯು ಅಂಥ ಒಪ್ಪಂದದ ಪಕ್ಷಕಾರನೇ ಎಂಬುದನ್ನು ನಿರ್ಧರಿಸಬೇಕಾಗಿರುತ್ತದೆ. ಕ್ಲೇಮು ನಿರರ್ಥಕವಾದುದೆ; ಅಥವಾ ಪುನರಾರಂಭಗೊಳಿಸಬೇಕಾದ ದೀರ್ಘಕಾಲೀನ ನಿಷೇಧಿತ ಕ್ಲೇಮೇ ಹಾಗೂ ಪಕ್ಷಕಾರರು ಅವರ ಪರಸ್ಪರ ಹಕ್ಕುಗಳು ಹಾಗೂ ಹೊಣೆಗಾರಿಕೆಗಳ ಜವಾಬ್ದಾರಿಯನ್ನು ದಾಖಲಿಸಿಕೊಳ್ಳುವ ಮೂಲಕ ವ್ಯವಹರಣೆಯನ್ನು ತೀರ್ಮಾನಿಸಿಕೊಂಡಿರುತ್ತಾರೆಯೆ ಎಂಬ ಪ್ರಶ್ನೆಯನ್ನು ಇವರು ನಿರ್ಧರಿಸಬೇಕೆಂಬುದನ್ನು ಸೂಚಿಸುವುದೂ ಅವಶ್ಯಕವಾಗಿರುತ್ತದೆ. ಪ್ರಸ್ತುತ ಮಾಡಲಾಗಿರುವ ಕ್ಲೇಮು ಮಧ್ಯಸ್ಥಿಕೆ ಖಂಡದ ಪುನರವಲೋಕನದೊಂದಿಗೆ ಬಂದಿರುವಂಥಹುದೆ ಎಂಬುದನ್ನು ನಿರ್ಧರಿಸಲು ಈ ಹಂತದಲ್ಲಿ ಸಾಧ್ಯವಾಗದಿರಬಹುದು. ಮಧ್ಯಸ್ಥಿಕೆಯಲ್ಲಿ ಒಳಗೊಂಡ ಕ್ಲೇಮುಗಳ ಗುಣಾರ್ಹತೆಗಳೊಂದಿಗೆ ಸಾಕ್ಷ್ಯವನ್ನು ತೆಗೆದುಕೊಳ್ಳುವುದರ ಕುರಿತು ಮಧ್ಯಸ್ಥಿಕೆ ನ್ಯಾಯಾಧಿಕರಣವು ಈ ಪ್ರಶ್ನೆಯನ್ನು ನಿರ್ಧರಿಸಬೇಕೆಂಬುದನ್ನು ಬಿಟ್ಟುಬಿಡುವುದು ಸೂಕ್ತವಾದುದಾಗಿರುತ್ತದೆ. ಮುಖ್ಯ ನ್ಯಾಯಮೂರ್ತಿಗಳು ಅಧಿನಿಯಮದ 11(6) ಪ್ರಕರಣದಡಿಯಲ್ಲಿ ಅರ್ಜಿದಾರನು ಮಧ್ಯಸ್ಥಿಕೆಗಾರನನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಷರತ್ತುಗಳನ್ನು ಪೂರೈಸಿದ್ದಾನೆಯೇ ಎಂಬುದನ್ನು ನಿರ್ಧರಿಸಬೇಕಾಗಿರುತ್ತದೆ. ಈ ಆಯಾಮಗಳನ್ನು ಕುರಿತಂತೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಮುಖ್ಯ ನ್ಯಾಯಮೂರ್ತಿಗಳು, ಅವಶ್ಯಕವಾಗಬಹುದಾದಂತೆ ಸಲ್ಲಿಸಿದ ಅಫಿಡಾವಿಟ್ಟುಗಳು ಹಾಗೂ ದಸ್ತಾವೇಜುಗಳ ಆಧಾರದ ಮೇಲೆ ಅಥವಾ ಅಂಥ ಸಾಕ್ಷ್ಯಗಳನ್ನು ತೆಗೆದುಕೊಳ್ಳುವ ಅಥವಾ ದಾಖಲಿಸಲಾದ ಅಂಥ ಸಾಕ್ಷ್ಯಗಳನ್ನು ಪಡೆದುಕೊಳ್ಳುವ ಆಧಾರದ*

*ಮೇಲೆ ಮುಂದುವರೆಸಬಹುದು. ನಾವು ಮಧ್ಯಸ್ಥಿಕೆ ನ್ಯಾಯಾಧಿಕರಣದ ಮುಂದಿರುವ ನಡಾವಳಿಗಳನ್ನು ವಿವಿಧ ಹಂತಗಳಲ್ಲಿ ನ್ಯಾಯಾಲಯಕ್ಕೆ ಹಲವಾರು ಮಾರ್ಗಗಳಿಲ್ಲದೆ ಅಧಿನಿಯಮದ ಈ ಪರಿಭಾಷೆಯಲ್ಲಿನ ಕಾರ್ಯವಿಧಾನದ ಅನ್ವಯವು, ಮಧ್ಯಸ್ಥಿಕೆಯ ಕಾರ್ಯವಿಧಾನವನ್ನು ಇತ್ಯರ್ಥಪಡಿಸುವ ಅಧಿನಿಯಮವು ಸಾಧಿಸಬೇಕೆಂದು ಕೋರುವ ಉದ್ದೇಶವನ್ನು ಈಡೇರಿಸುತ್ತದೆಂದು ನಾವು ಯೋಚಿಸುತ್ತೇವೆ"*

*(ನಮ್ಮಿಂದ ಒತ್ತು ನೀಡಲಾಗಿರುತ್ತದೆ)*

9. ***ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ –ವಿರುದ್ಧ– ಎಸ್‌ಪಿಎಸ್ ಇಂಜಿನಿಯರಿಂಗ್ ಲಿಮಿಟೆಡ್***[5], ಪ್ರಕರಣದಲ್ಲಿ, ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ;

*"14. ಕ್ಲೇಮನ್ನು ಪೂರ್ವ ನ್ಯಾಯವೆಂದು ನಿಷೇಧಿಸಲಾಗಿದೆಯೆ ಅಥವಾ ಕ್ಲೇಮು "ದುರ್ಭಾವನೆ"ಯಿಂದ ಕೂಡಿದುದೆ ಎಂಬುದನ್ನು ಕಂಡುಕೊಳ್ಳಲು, ವಾಸ್ತವಾಂಶಗಳು ಹಾಗೂ ಸೂಕ್ತ ದಸ್ತಾವೇಜುಗಳನ್ನು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ. ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ಅರ್ಜಿಯಲ್ಲಿ ನಿರ್ಧರಿಸಬೇಕಾದುದೇನೆಂದರೆ, ಪಕ್ಷಕಾರರ ನಡುವೆ ಮಧ್ಯಸ್ಥಿಕೆ ಒಪ್ಪಂದವು ಆಗಿರುತ್ತದೆಯೆ ಎಂಬುದಾಗಿರುತ್ತದೆ. ಮುಖ್ಯ ನ್ಯಾಯಮೂರ್ತಿಗಳನ್ನು ಅಥವಾ ಅವರ ನಾಮ ನಿರ್ದೇಶಿತರನ್ನು, ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ಅರ್ಜಿಯಲ್ಲಿ ಕ್ಲೇಮಿನ ಊರ್ಜಿತತ್ವವನ್ನು ಪರೀಕ್ಷಿಸುವುದು ಅಥವಾ ಕ್ಲೇಮಿನ ಗುಣಾರ್ಹತೆಗಳನ್ನು ಪರಿಶೀಲಿಸಬೇಕೆಂದು ನಿರೀಕ್ಷಿಸಲಾಗುವುದಿಲ್ಲ. ಆದಾಗ್ಯೂ, ಮುಖ್ಯ ನ್ಯಾಯಮೂರ್ತಿಗಳು ಅಥವಾ ಅವರ ನಾಮ ನಿರ್ದೇಶಕರು, ಕ್ಲೇಮು ನಿರರ್ಥಕವಾದ ಕ್ಲೇಮು (ದೀರ್ಘ ಕಾಲೀನವಾಗಿ ನಿಷೇಧಿತವಾದ) ಆಗಿರುವುದೆ ಅಥವಾ*

5. (2011)3 ಎಸ್‌ಸಿಸಿ 507

*ಪಕ್ಷಕಾರರ ಒಪ್ಪಂದದಡಿಯಲ್ಲಿನ ಎಲ್ಲಾ ಹಕ್ಕುಗಳು, ಹೊಣೆಗಾರಿಕೆಗಳು ಹಾಗೂ ಪರಿಹಾರಗಳನ್ನು ಮಾನದಂಡಗಳನ್ನು ದಾಖಲಿಸುವ ಮೂಲಕ, ಕರಾರು ಇಲ್ಲವೇ ಮಧ್ಯಸ್ಥಿಕೆ ಒಪ್ಪಂದವು ಊರ್ಜಿತವಾದುದಾಗಿರುತ್ತದೆಯೇ ಎಂಬುದನ್ನು ನಿರ್ಧರಿಸಬಹುದು. ಮುಖ್ಯ ನ್ಯಾಯಮೂರ್ತಿಗಳು ಅಥವಾ ಅವರ ನಾಮ ನಿರ್ದೇಶಿತರು, ಕ್ಲೇಮನ್ನು ನಿರರ್ಥಕ ಕ್ಲೇಮೇ ಎಂದು ನಿರ್ಧರಿಸಲು ಆಯ್ಕೆ ಮಾಡಿಕೊಳ್ಳಬಹುದು ಎಂದು ಹೇಳುವಾಗ, ಕ್ಲೇಮು ಸ್ಪಷ್ಟವಾಗಿ ಹಾಗೂ ನಿಖರವಾಗಿ ದೀರ್ಘಕಾಲೀನ ಕ್ಲೇಮಾಗಿದ್ದಾಗ ಹಾಗೂ ವಿವರವಾಗಿ ಸಾಕ್ಷ್ಯವನ್ನು ಪರಿಶೀಲಿಸುವ ಅಗತ್ಯವಿಲ್ಲದಿರುವಾಗ ಮಾತ್ರ ಅವರು ಹಾಗೆ ಮಾಡುತ್ತಾರೆಂಬುದು ಈ ಸಂದರ್ಭದ ಇಂಗಿತಾರ್ಥವಾಗಿರುತ್ತದೆ. ನಾವು ಇದನ್ನು ಒಂದು ಉದಾಹರಣೆಯ ಮೂಲಕ ವಿಷದೀಕರಿಸಬಹುದಾಗಿರುತ್ತದೆ. ಗುತ್ತಿಗೆದಾರನು, ಕಾನೂನಿನಲ್ಲಿ ಜೀವಂತವಾಗಿರುವ ಹಾಗೂ ಕ್ಲೇಮು ಹಾಗೂ ಅದು ದೀರ್ಘಕಾಲದಿಂದ ಎದ್ದುಕಾಣುವಂತೆ ನಿಷೇಧಿಸಲ್ಪಟ್ಟಿದ್ದ ಹೊಣೆಗಾರಿಕೆಯಲ್ಲಿ ಅಥವಾ ಇತರೆ ಅಂಶಗಳ ಯಾವುದೇ ಒಪ್ಪಿಗೆಗೆ ಉಲ್ಲೇಖಿಸದೆ, ಒಂದು ದಶಕದ ಅಥವಾ ಹಾಗೆ ಆ ಕಾಮಗಾರಿ ಪೂರ್ಣಗೊಂಡ ತರುವಾಯ ಕ್ಲೇಮನ್ನು ಸಲ್ಲಿಸಿದಲ್ಲಿ, ಮುಖ್ಯ ನ್ಯಾಯವಾಗಿ ಅಥವಾ ಅವರ ನಾಮನಿರ್ದೇಶಿತರು ಕ್ಲೇಮು ನಿರರ್ಥಕವಾದ ಅಂದರೆ, ದೀರ್ಘಕಾಲದಿಂದ ನಿಷೇಧಿಸಲ್ಪಟ್ಟ ಕ್ಲೇಮು ಎಂಬುದನ್ನು ಪರಿಶೀಲಿಸುತ್ತಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಕಾಮಗಾರಿಯು ಪೂರ್ಣಗೊಂಡ ಮೂರು ವರ್ಷಗಳನ್ನು ಮೀರಿ ಆದರೆ ಕಾಮಗಾರಿಯು ಪೂರ್ಣಗೊಂಡ ಐದು ವರ್ಷಗಳ ಒಳಗೆ, ಹಾಗೂ ಕ್ಲೇಮು ಸಲ್ಲಿಸುವ ಮೊದಲು ಮೂರು ವರ್ಷಗಳೊಳಗೆ ಅಂತಿಮ ಬಿಲ್ಲನ್ನು ಪಡೆದುಕೊಂಡಿದ್ದು, ಪಾವತಿಗಳನ್ನು ಮಾಡಿದ್ದು ಗುತ್ತಿಗೆದಾರನು ಸಂದಾಯಕ್ಕೆ ಸಂಬಂಧಿಸಿದಂತೆ ಕ್ಲೇಮನ್ನು ಮಾಡಿದಲ್ಲಿ, ನ್ಯಾಯಾಲಯವು, ಪರಿಮಿತಿಯ ಮೂಲಕ ಕ್ಲೇಮನ್ನು ನಿಷೇಧಿಸಬೇಕೆ*

*ಅಥವಾ ಇಲ್ಲವೆ ಎಂಬ ವಿವಾಹಿತ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುತ್ತದೆ. ನ್ಯಾಯಾಲಯವು ನ್ಯಾಯಾಧಿಕರಣದ ನಿರ್ಧಾರಕ್ಕೆ ವಿಷಯವನ್ನು ಬಿಟ್ಟುಬಿಡುತ್ತದೆ. ಸ್ಪಷ್ಟವಾಗಿ ಹಾಗೂ ನಿಖರವಾಗಿ ಇರುವ ನಿರರ್ಥಕ ಕ್ಲೇಮುಗಳು ಹಾಗೂ ಪರಿಮಿತಿಯ ವಿವಾದಿತ ವಿಷಯಗಳನ್ನು ಒಳಗೊಂಡಿರುವ ಕ್ಲೇಮುಗಳ ಇವುಗಳ ನಡುವೆ ಭಿನ್ನತೆಯಿದ್ದಲ್ಲಿ, ಮುಖ್ಯ ನ್ಯಾಯಮೂರ್ತಿ ಅಥವಾ ಅವರ ನಾಮ ನಿರ್ದೇಶಿತರು, ಅಧಿನಿಯಮದ 11ನೇ ಪ್ರಕರಣದಡಿಯಲ್ಲಿ ಎಲ್ಲಾ ಅರ್ಜಿಗಳಲ್ಲಿನ ಪರಿಮಿತಿಯ ಪ್ರಶ್ನೆಯನ್ನು ನಿರ್ಣಯಿಸುತ್ತಾರೆ.*

15. ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ಅರ್ಜಿಯು ಅಂಥ ವಿವಾದವನ್ನು ನಿರ್ಧರಿಸಲು, ವಿವಾದದ ಅಸ್ತಿತ್ವ ಕುರಿತಂತೆ ಹಾಗೂ ಮಧ್ಯಸ್ಥಿಕೆ ಒಪ್ಪಂದದ ಅಸ್ಥಿತ್ವ ಕುರಿತ ವಾದಗಳನ್ನು ಒಳಗೊಳ್ಳಬೇಕೆಂದು ನಿರೀಕ್ಷಿಸುತ್ತದೆ. ಅರ್ಜಿದಾರನನ್ನು, ಪರಿಮಿತಿಗೆ ಸಂಬಂಧಿಸಿದ ಕ್ಲೇಮನ್ನು ಸಮರ್ಥಿಸಿಕೊಳ್ಳಲು ಅಥವಾ ಸಂಪೂರ್ಣವಾಗಿ ವಾದ ಮಾಡಲು ಅಥವಾ ಕ್ಲೇಮು ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ನಡಾವಳಿಗಳಲ್ಲಿನ ಕಾಲದೊಳಗಿದೆಯೆಂದು ಸಾಬೀತುಪಡಿಸಲು ದಸ್ತಾವೇಜುಗಳನ್ನು ಹಾಜರುಪಡಿಸಲು ನಿರೀಕ್ಷಿಸುವಂತಿರುವುದಿಲ್ಲ. ಆ ವಿವಾದಾಂಶವನ್ನು ಸಾಮಾನ್ಯವಾಗಿ, ಮಧ್ಯಸ್ಥಿಕೆ ನ್ಯಾಯಾಧಿಕರಣಕ್ಕೆ ಬಿಟ್ಟುಬಿಡಬೇಕು. ಮುಖ್ಯ ನ್ಯಾಯಮೂರ್ತಿ ಅಥವಾ ಅವರ ನಾಮನಿರ್ದೇಶಿತರು, ಪಕ್ಷಕಾರರ ನಡುವೆ ಮಧ್ಯಸ್ಥಿಕೆ ಒಪ್ಪಂದವು ಇದೆಯೆ ಎಂಬುದನ್ನು ಪರಿಶೀಲಿಸುವುದರ ಜೊತೆಗೆ, ಕ್ಲೇಮು ನಿರರ್ಥಕ (ದೀರ್ಘಕಾಲದಿಂದ ನಿಷೇಧಿತವಾದ) ವಾದುದೆ ಎಂಬ ವಿವಾದವನ್ನು ಅಥವಾ ಗುತ್ತಿಗೆಯಡಿಯಲ್ಲಿನ ಪರಸ್ಪರ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ಪಾಲಿಸಲಾಗಿದೆಯೆ ಎಂಬುದನ್ನು ಪರಿಗಣಿಸಬೇಕೆಂದೂ, ಹಾಗೆ ಮಾಡಿದ ಪಕ್ಷಕಾರರು, ತಮ್ಮ ಉದ್ದೇಶವನ್ನು ದಾಖಲಿಸಬೇಕೆಂದು ಹಾಗೂ ಅಂಥ ವಿವಾದಾಂಶ ಕುರಿತಂತೆ ಅವರ ವಿಷಯವನ್ನು ವಾದವನ್ನು

> ಮಂಡಿಸಲು ಪಕ್ಷಕಾರರಿಗೆ ಅವಕಾಶ ನೀಡಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಅಂಥ ವಿವಾದಾಂಶವನ್ನು ಪರಿಶೀಲಿಸಲಾಗುವುದೆಂಬ ಸೂಚನೆಯನ್ನು ಪಕ್ಷಕಾರರಿಗೆ ನೀಡದ ಹೊರತು, ಅವರು ತಮ್ಮ ನಡುವೆ ಉದ್ಭವಿಸಿರುವ ಅಧಿಕಾರ ವ್ಯಾಪ್ತಿಯ ಪ್ರಶ್ನೆಗಳು ಹಾಗೂ ಮಧ್ಯಸ್ಥಿಕೆ ಒಪ್ಪಂದದ ಊರ್ಜಿತತ್ವ ಕುರಿತ ಪ್ರಶ್ನೆಗಳು, ಇಂಥ ನಡಾವಳಿಗಳಲ್ಲಿ ಪರಿಶೀಲಿಸಲಾಗುತ್ತದೆ ಎಂಬ ಭಾವನೆಯಲ್ಲಿಯೇ ಇರುತ್ತಾರೆ".
>
> (ನನ್ನಿಂದ ಒತ್ತು ನೀಡಲಾಗಿರುತ್ತದೆ)

10. ಎ ಮತ್ತು ಸಿ ಅಧಿನಿಯಮದ 11ನೇ ಪ್ರಕರಣದಡಿಯಲ್ಲಿನ ಅರ್ಜಿಯ ವ್ಯಾಪ್ತಿಗೆ ಸಂಬಂಧಪಟ್ಟ ಕಾನೂನಿನ ಸ್ಥಿತಿ ಗತಿಗೆ ವಿರುದ್ಧವಾಗಿ ಪರಿಮಿತಿಯಿಂದ ನಿಷೇಧಿತವಾಗಿರುವ ನಿರರ್ಥಕ ಕ್ಲೇಮಿಗೆ ಸಂಬಂಧಿಸಿದ ವಾದವು, ಉದಾಹರಣೆಯೊಂದಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಷದೀಕರಿಸಿದ ಹಿನ್ನೆಲೆಯಲ್ಲಿ ಕ್ಲೇಮನ್ನು ಜೀವಂತವಾಗಿಡಬೇಕೆ ಅಥವಾ ವರ್ತನೆಯ ಮೂಲಕ ಪರಿತ್ಯಜಿಸಬೇಕೆಂದು ಪರಿಗಣಿಸಬೇಕೆ ಎಂಬುದನ್ನು ಪ್ರತೀ ಸಂದರ್ಭದಲ್ಲೂ ಉದ್ಭವಿಸಿದ ವಾಸ್ತವಾಂಶಗಳಲ್ಲಿ ಕಂಡು ಕೊಳ್ಳುವಂಥ ದೃಷ್ಟಿಯನ್ನು ಇಟ್ಟುಕೊಳ್ಳ ಬೇಕಾಗಿರುತ್ತದೆಂಬುದಾಗಿರುತ್ತದೆ. ಹಾಗಾಗಿ, ಪ್ರಸ್ತುತದ ವಾಸ್ತವಾಂಶಗಳನ್ನು, 1996ರಲ್ಲಿ ನೋಟೀಸನ್ನು ನೀಡಿರುವುದರಿಂದ ಹಾಗೂ ಪ್ರಸ್ತುತ ಅರ್ಜಿಯನ್ನು ಈ ಹಂತದಲ್ಲಿ ಸಲ್ಲಿಸಲಾಗಿರುವುದರಿಂದ ಮಾತ್ರ ಪ್ರಸ್ತುತ ಅರ್ಜಿಯ ಮೂಲಕ ಮತ್ತೊಮ್ಮೆ ಪ್ರಶ್ನಿಸಲು ಕೋರಿದಂಥ ಕ್ಲೇಮನ್ನು, ನಿರರ್ಥಕ ಕ್ಲೇಮೆ ಅಥವಾ ದೀರ್ಘಕಾಲದಿಂದ ನಿಷೇಧಿಸಲ್ಪಟ್ಟ ಕ್ಲೇಮೆ ಎಂಬ ತೀರ್ಮಾನಕ್ಕೆ ಬರಲು ಪರಿಶೀಲಿಸಬೇಕಾಗಿರುತ್ತದೆ.

11. ಮೇಲಿನದರ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಕರಣದಲ್ಲಿನ ಸಂದರ್ಭಗಳ ಪರಿಶೀಲನೆಯು, ಒಪ್ಪಂದ ಹಾಗೂ ಐದು ಪೂರಕ ಒಪ್ಪಂದಗಳ ಸಂಬಂಧದಲ್ಲಿ, ಕೆಲವು ವಿವಾದಾಂಶಗಳು, ಅರ್ಜಿದಾರರು ಕ್ಲೇಮನ್ನು ಮಾಡಿದ 22.6.1996ನೇ (ಅನುಬಂಧ-ಕೆ) ದಿನಾಂಕದ ಕಾನೂನು ನೋಟೀಸನ್ನು ಹೊರಡಿಸಿದ್ದಕ್ಕೆ ಸಂಬಂಧಿಸಿದಂತೆ ಉದ್ಭವಿಸಿರುತ್ತವೆಂಬುದನ್ನು ಬಹಿರಂಗಪಡಿಸುತ್ತದೆ. ಒಪ್ಪಂದದಲ್ಲಿನ

ಮಧ್ಯಸ್ಥಿಕೆ ಖಂಡದ ಅಸ್ತಿತ್ವದ ಹಿನ್ನೆಲೆಯಲ್ಲಿ, ಪಾಲಿಸದಿರುವ ತಗಾದೆ ಕುರಿತಂತೆ, ಸ್ವಾಭಾವಿಕ ನಡೆಯಲ್ಲಿ ಆ ಸಮಯದಲ್ಲಿ, ಆ ಆಯಾಮದಲ್ಲಿ ನಡೆಯುತ್ತಿರುವ ಕಾನೂನಿನಡಿಯಲ್ಲಿ, ಮಧ್ಯಸ್ಥಿಕೆ ನಡಾವಳಿಗಳನ್ನು ಆರಂಭಿಸುವ ನಿರ್ದೇಶನದಲ್ಲಿ ಮುನ್ನಡೆಸಬೇಕಾಗಿರುತ್ತದೆಂಬುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದು ಸತ್ಯವಾದುದಾಗಿರುತ್ತದೆ. ಆದಾಗ್ಯೂ, ಸದರಿ ನಡೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ ಇಲ್ಲಿನ ಅರ್ಜಿದಾರ ಸಂಖ್ಯೆ 2 ಮತ್ತು 3 ರವರುಗಳು, ಪ್ರತ್ಯರ್ಜಿದಾರನು, ಸದರಿ ಅಧಿನಿಯಮದಡಿಯಲ್ಲಿ ಒಂದು ಸಹಕಾರಿ ಸಂಘವನ್ನು ನಡೆಸುತ್ತಿರುವುದರಿಂದ, ಕೆಸಿಎಸ್ ಅಧಿನಿಯಮದ 70ನೇ ಪ್ರಕರಣದಡಿಯಲ್ಲಿ ವಿವಾದವನ್ನು ಪ್ರಸ್ತಾಪಿಸಿರುತ್ತಾರೆ. ಸದರಿ ವ್ಯವಹರಣೆಗಳನ್ನು ಪ್ರಕರಣ ಸಂಖ್ಯೆ 862/1996–97ಕ್ಕೆ ವಹಿಸಿರುತ್ತಾರೆ. ಅಲ್ಲದೆ ದಾಖಲೆಗಳು, 29.1.97ರಂದು ಆರಂಭಿಕ ನಡಾವಳಿಗಳನ್ನು ನಡೆಸಿರುತ್ತವೆಂಬುದನ್ನು ಸೂಚಿಸುತ್ತವೆ. ಎಂದರೆ 22.06.1996ರಂದು ಹೊರಡಿಸಿದ ನೋಟೀಸನ್ನು ಇದು ಅನುಸರಣೆ ಮಾಡಿರುತ್ತದೆ. ಸದರಿ ನಡಾವಳಿಗಳನ್ನು 02.08.2008 (ಅನುಬಂಧ–ಎಲ್) ರಂದು, ಗುಣಾರ್ಹತೆಗಳ ಮೇಲೆ ಹೊರಡಿಸಿದ ಪರಿಗಣಿತ ಆದೇಶದೊಂದಿಗೆ ತೀರ್ಮಾನಿಸಬೇಕಾಗಿರುತ್ತದೆ. ಇದೂ ಕೂಡ ಸರಿ ಸುಮಾರು ಅದೇ ಸಮಯದಲ್ಲಿ, ಅಂದರೆ, 02.08.2008ರಂದು (ಅನುಬಂಧ–ಆರ್2) ಪ್ರತ್ಯರ್ಜಿದಾರ ಸಂಘವು, ಮೇಲೆ ಹೇಳಲಾದ ಎಲ್ಲಾ ಒಪ್ಪಂದಗಳನ್ನು ವಜಾ ಮಾಡುವ ನೋಟೀಸನ್ನು ಹೊರಡಿಸಿರುತ್ತದೆ. 02.08.2008ರಂದಿನ ಆದೇಶದಿಂದ ಸಂಪೂರ್ಣವಾಗಿ ಲಾಭ ಪಡೆಯದ ಇಲ್ಲಿನ ಅರ್ಜಿದಾರ ಸಂ.2 ಮತ್ತು 3 ರವರುಗಳು ಅಪೀಲು ಸಂ.594/2008ರಲ್ಲಿ ಕೆಎಟಿಯ ಮುಂದೆ ಅಪೀಲನ್ನು ಸಲ್ಲಿಸಿರುತ್ತಾರೆ. ಸದರಿ ಅಪೀಲನ್ನು 29.08.2013ರಂದಿನ ಆದೇಶದ ಮೂಲಕ ವಿಲೇ ಮಾಡಲಾಗಿರುತ್ತದೆ. (ಅನುಬಂಧ–ಎಸ್)

12. ಮೇಲಿನ ಸದರಿ ಆದೇಶದ ಮೂಲಕ, ಕೆಎಟಿಯು, ಅರ್ಜಿದಾರರು, ಪ್ರತ್ಯರ್ಜಿದಾರ ಸಂಘದ ಸದಸ್ಯರಾಗಿಲ್ಲದೆ ಸದರಿ ಉಪಬಂಧದಡಿಯಲ್ಲಿ ವಿವಾದವನ್ನು ಪ್ರಸ್ತಾಪಿಸಬಾರದಾಗಿರುವುದರಿಂದ, ಕೆಸಿಎಸ್‌ನ 70ನೇ ಪ್ರಕರಣದಡಿಯಲ್ಲಿ ನಡಾವಳಿಗಳನ್ನು ಆರಂಭಿಸುವುದು ಅಧಿಕಾರ ವ್ಯಾಪ್ತಿಯನ್ನು ಮೀರದೆಂಬ ತೀರ್ಮಾನಕ್ಕೆ ಬಂದಿರುತ್ತದೆ. ಆ ಹಿನ್ನೆಲೆಯಲ್ಲಿ, 02.08.2008ನೇ ದಿನಾಂಕದ ಆದೇಶವನ್ನು

ರದ್ದುಪಡಿಸಲಾಗಿರುತ್ತದೆ. ಕೆಎಟಿಯು 29.08.2013ರ ದಿನಾಂಕದ ಆದೇಶವನ್ನು ಹೊರಡಿಸಿದ ಕೂಡಲೇ, ಅರ್ಜಿದಾರರಿಗೆ, ಪ್ರತ್ಯರ್ಜಿದಾರರ ವಿರುದ್ಧ ಕ್ಲೇಮು ಮಾಡಿದ್ದಕ್ಕಾಗಿ 28.09.2013ರಂದು ನೋಟೀಸನ್ನು ನೀಡಲಾಗಿರುತ್ತದೆ. ಜೊತೆಗೆ, ಸದರಿ ದಾವೆಯಲ್ಲಿ ಪ್ರತ್ಯರ್ಜಿದಾರನು ಪಕ್ಷಕಾರನಾಗದಿದ್ದಾಗ್ಯೂ ಅರ್ಜಿದಾರರು, 02.01.2013ರಂದು ವಿಲೆ ಮಾಡಿದಂಥ ಒ.ಎಸ್.ಸಂ.27/2006ರಲ್ಲಿ ದಾವೆಯನ್ನು ಸಲ್ಲಿಸಿದ್ದು, ಅದು, ಲೇಔಟ್ ಆಗಿ ರೂಪಿಸಬೇಕಾಗಿರುವ ಜಮೀನಿಗೆ ಸಂಬಂಧಿಸಿದ್ದಾಗಿರುತ್ತದೆ. 22.06.1996ರಿಂದ 06.09.14ರಂದು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವ ದಿನಾಂಕದವರೆಗೆ ಗಮನಿಸಲಾದ ಘಟನೆಗಳು, ವಿಷಯವನ್ನು ಪರಿತ್ಯಜಿಸಲಾಗುವುದಿಲ್ಲ. ಆದರೆ, ಬೇರೆ ಬೇರೆ ವೇದಿಕೆಗಳ ಮುಂದೆ ಮುಷ್ಕರ ಮಾಡಿರುತ್ತಾರೆಂಬುದನ್ನು ಬಹಿರಂಗಪಡಿಸುತ್ತದೆ.

13. ಆದಾಗ್ಯೂ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಕೆಸಿಎಸ್ ಅಧಿನಿಯುಮದಡಿಯಲ್ಲಿನ ಸದರಿ ನಡಾವಳಿಗಳನ್ನು, ಒಪ್ಪಂದ ವನ್ನು ಮಾಡಿಕೊಂಡವರೊಂದಿಗೆ ಪಾಲುದಾರಿಕೆ ಸಂಸ್ಥೆಯು ಆರಂಭಿಸುವಂತಿರುವುದಿಲ್ಲ ಅಲ್ಲದೆ ಸದರಿ ನಡಾವಳಿಗಳಲ್ಲೂ ಕೂಡ ಲಭ್ಯವಿರುವ ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ಯಾವುದೇ ವಾದ ಪತ್ರವಿರುವುದಿಲ್ಲ ಹಾಗೂ ಕೆಸಿಎಸ್ ಅಧಿನಿಯಮದ ಅಡಿಯಲ್ಲಿನ ಸದರಿ ನಡಾವಳಿಗಳಿಗೆ ಸಂಬಂಧಿಸಿದ ವಾಸ್ತವಿಕ ಕಾರಣಗಳು ಮುಂದುವರೆಯುತ್ತವೆಂದು ವಾದಿಸಿರುತ್ತಾರೆ. ಆದಾಗ್ಯೂ, ಕೆಸಿಎಸ್ ಅಧಿನಿಯಮದ 7ನೇ ಪ್ರಕರಣದಡಿಯಲ್ಲಿನ ನಡಾವಳಿಗಳಲ್ಲಿ ಅರ್ಜಿದಾರರು ಇಲ್ಲಿನ ಮೊದಲ ಅರ್ಜಿದಾರರ ಪಾಲುದಾರರಾಗಿರುತ್ತಾರೆ ಹಾಗೂ ಅವರು ಪ್ರಸ್ತುತ ಅರ್ಜಿಯಲ್ಲಿ ಅರ್ಜಿದಾರ ಸಂಖ್ಯೆ 2 ಹಾಗೂ 3 ರಂದು ಸೇರಿಕೊಂಡಿರುತ್ತಾರೆ ಎಂಬುದು ವಿವಾದದ ಅಂಶವಾಗಿರುವುದಿಲ್ಲ. ಅದರೊಂದಿಗೆ, ಕೆಸಿಎಸ್ ಅಧಿನಿಯಮದಡಿಯಲ್ಲಿನ ನಡಾವಳಿಗಳು, ಅರ್ಜಿದಾರ ಸಂಖ್ಯೆ 1 ಸಂಸ್ಥೆಗೆ ಹಾಗೂ ಪಕ್ಷಕಾರರ ನಡುವೆ ವ್ಯವಹರಣೆಯ ಸ್ವರೂಪಕ್ಕೆ ಉಲ್ಲೇಖವನ್ನು ರೂಪಿಸಿರುತ್ತವೆಂಬುದನ್ನು ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ನಿಖರವಾಗಿಯೇ ತಿಳಿಸಿರುತ್ತಾರೆ. ಸದರಿ ನಡಾವಳಿಗಳಲ್ಲಿನ ಪರಿಗಣನೆಗೆ ಸಂಬಂಧಿಸಿದಂತೆ ಉದ್ಭವಿಸಿದ ವಿವಾದಾಂಶವು, ಪ್ರಸ್ತುತ ಉದ್ಭವಿಸಿರುವಂಥ ವಿವಾದವೂ ಒಂದೇ ಆಗಿರುತ್ತದೆ. ಸದರಿ ನಡಾವಳಿಗಳು

ವಾಸ್ತವಾಂಶಗಳಾಗಿರುತ್ತವೆಂಬುದನ್ನು ಸೂಚಿಸುವ ಯಾವುದೇ ಸಾಕ್ಷ್ಯ ಅಥವಾ ವಿಷಯವಿರುವುದಿಲ್ಲವೆಂಬ ವಾದದ ಮಟ್ಟಿಗೆ, ಕಾನೂನು ಕ್ರಮ ಜರುಗಿಸುವುದು, ಕಾಲ ಪರಿಮಿತಿ ಅಧಿನಿಯಮದ 14ನೇ ಪ್ರಕರಣಕ್ಕೆ ಉಲ್ಲೇಖಿಸುವ ಮೂಲಕ ಕಾಲವನ್ನು ನಿಷೇಧಿಸುವುದರಿಂದ ಕ್ಲೇಮನ್ನು ಉಳಿಸುವುದರ ಸಂಬಂಧದಲ್ಲಿ ಮಂಡಿಸಿದ ವಾದದ ಆಯಾಮವು ಮಧ್ಯಸ್ಥಿಕೆ ನಡಾವಳಿಗಳಲ್ಲಿ ಉದ್ಭವಿಸಿದಂಥ ಆಯಾಮವೇ ಆಗಿರುವುದರಿಂದ ಈ ಅರ್ಜಿಯ ವ್ಯಾಪ್ತಿಯಲ್ಲಿ ಪರಿಗಣಿಸಬೇಕೆಂದು ಅಗತ್ಯಪಡಿಸಿದಂಥ ವಿವಾದಾಂಶವಾಗಿರುವುದಿಲ್ಲ. ಅದರೊಂದಿಗೆ ಕಾಲಪರಿಮಿತಿ ಅಧಿನಿಯಮದ 55 ಮತ್ತು 113ನೇ ಅನುಚ್ಛೇದಗಳಡಿಯಲ್ಲಿ ಕಾಲದ ಚೌಕಟ್ಟಿನ ಅನ್ವಯವೂ ಸಹ ಈ ಅರ್ಥವ್ಯಾಪ್ತಿಯೊಳಗೇ ಉದ್ಭವಿಸುವಂತಿದ್ದು, ಆದರೆ, ಪ್ರಸ್ತುತ ಅರ್ಜಿಯಮಟ್ಟಿಗೆ, ಅದರಲ್ಲಿ ನಿರ್ದಿಷ್ಟಪಡಿಸಿದ ಸಮಯವನ್ನು ಗಣನೆಗೆ ತೆಗೆದುಕೊಂಡಲ್ಲಿ, ಅಪೀಲು ಸಂಖ್ಯೆ 594/2008ನ್ನು ಸದರಿ ನಡಾವಳಿಗಳು ಅಧಿಕಾರ ವ್ಯಾಪ್ತಿಯ ಅಭಾವದಲ್ಲಿವೆಯೆಂದು ತೀರ್ಮಾನಿಸಿ 29.08.2013ರಂದು ಕೆಏಟಿಯು ವಿಲೆ ಮಾಡಿದ್ದು ಪ್ರಸ್ತುತ ಅರ್ಜಿಯನ್ನು 06.09.2014ರಂದು ಸಲ್ಲಿಸಿದ್ದು, ಇದು ಸದರಿ ಅವಧಿಯೊಳಗೇ ಇರುತ್ತದೆ. ಆದ್ದರಿಂದ, ವಿಷಯದ ಅಂಥ ಆಯಾಮಗಳನ್ನು ವಿವರಣಾತ್ಮಕವಾಗಿ ಹೇಳಿಕೊಳ್ಳದಿದ್ದಲ್ಲಿ, ಇದು ಹಿಂದೆ ಉದಾಹರಿಸಿದಂಥ ತೀರ್ಪುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ ಪ್ರಸ್ತುತ ಸ್ವರೂಪದ ನಡಾವಳಿಗಳಲ್ಲಿ ಕೈಗೊಳ್ಳದಿರುವಂಥ ಪ್ರಯತ್ನದ ಕ್ಲೇಮಿನ ಸಿಂಧುತ್ವವನ್ನು ನಿರ್ಣಯಿಸಲು ಕಾರಣವಾಗುತ್ತದೆ. ಸದರಿ ನಿರ್ಣಯಗಳಿಂದ ಮಾರ್ಗದರ್ಶನ ಪಡೆದು, ಇಲ್ಲಿ ಪ್ರಕಟವಾದ ಸಂದರ್ಭಗಳು ಅರ್ಜಿದಾರರು, ಅವರ ಹಕ್ಕನ್ನು ಪಡೆಯಲು ಹಾಗೂ ಕ್ಲೇಮನ್ನು ಮುಂದುವರೆಸಲು 22.06.1996ರ ನೋಟೀಸನ್ನು ಹೊರಡಿಸಿದ ತರುವಾಯ ಯಾವುದೇ ಕ್ರಮ ತೆಗೆದುಕೊಳ್ಳದೆ ವಿಷಯವನ್ನು ಪರಿತ್ಯಜಿಸಿರುವುದಿಲ್ಲ ಅಥವಾ ಕೈಚೆಲ್ಲಿ ಕುಳಿತಿರುವುದಿಲ್ಲವೆಂಬುದನ್ನು ಬಹಿರಂಗಪಡಿಸುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಈ ಸಂಬಂಧವಾಗಿ ಬೇರೆ ಬೇರೆ ವೇದಿಕೆಯಲ್ಲಿ ಹೋರಾಟ ನಡೆಸಿರುತ್ತಾರೆ. ಹಾಗಾಗಿ, ವಿವಾದವನ್ನು ನಿರ್ಲಿಪ್ತ ಸ್ಥಿತಿಯಲ್ಲಿತ್ತು ಎಂದು ಪರಿಗಣಿಸಬೇಕಾಗಿಲ್ಲ. ಆದಾಗ್ಯೂ ಕ್ಲೇಮಿನ ಸಂಬಂಧದೊಂದಿಗಿನ ಪರಿಮಿತಿ ಆಯಾಮವನ್ನು ಒಳಗೊಂಡಂತ ಗುಣಾರ್ಹತೆಗಳನ್ನು ಕುರಿತ ಎಲ್ಲಾ ವಾದಗಳನ್ನು ಮಧ್ಯಸ್ಥಿಕೆದಾರರು ನ್ಯಾಯ ನಿರ್ಣಯಿಸಬೇಕೆಂದು ಮುಕ್ತವಾಗಿಡಬೇಕಾಗಿರುತ್ತದೆ.

86

14. ಮೇಲೆ ಹೇಳಿದ ಕಾರಣಗಳಿಗಾಗಿ ಈ ಮುಂದಿನ ಆಜ್ಞೆಯನ್ನು ಮಾಡಲಾಗಿದೆ.

**ಆಜ್ಞೆ**

(i) ಅರ್ಜಿಯನ್ನು ಅಂಗೀಕರಿಸಿ, ಮಾನ್ಯ ಮಧ್ಯಸ್ಥಿಕೆಗಾರರ ಮುಂದೆ ಮಂಡಿಸಬೇಕಾದ ಪರಿಮಿತಿಯ ಪ್ರಶ್ನೆಯನ್ನೂ ಒಳಗೊಂಡಂತೆ ಗುಣಾರ್ಹತೆಗಳ ಆಧಾರದ ಮೇಲೆ ಎಲ್ಲಾ ವಾದಗಳನ್ನು ಮುಕ್ತವಾಗಿಡಲಾಗಿರುತ್ತದೆ.

(ii) ಆ ಹಿನ್ನೆಲೆಯಲ್ಲಿ, ಈ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾಗಿದ್ದ, ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ್‌ರವರನ್ನು, ಮಧ್ಯಸ್ಥಿಕೆ ಕೇಂದ್ರ, ಬೆಂಗಳೂರು ನಿರ್ವಹಿಸುವ ಕಾನೂನು ಹಾಗೂ ನಿಯಮಗಳ ನಿಬಂಧನೆಗಳ ಮೂಲಕ ಪಕ್ಷಕಾರರ ನಡುವಿನ ವಿವಾದವನ್ನು ಬಗೆಹರಿಸಲು, ವಹಿಸಿಕೊಡುವುದಕ್ಕೆ ಏಕೈಕ ಮಧ್ಯಸ್ಥಿಕೆದಾರರಂತೆ ನೇಮಕ ಮಾಡಲಾಗಿರುತ್ತದೆ.

(iii) ಈ ವಿಷಯದಲ್ಲಿ ಹೆಚ್ಚಿನ ಕ್ರಮ ಕೈಗೊಳ್ಳಲು ಮಧ್ಯಸ್ಥಿಕೆ ಕೇಂದ್ರಕ್ಕೆ ಈ ಆದೇಶದ ಪ್ರತಿಯನ್ನು ಕಳುಹಿಸಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿರುತ್ತದೆ.

(iv) ಪಕ್ಷಕಾರರು ಯಾವುದೇ ಮೂಲ ದಾಖಲೆಗಳನ್ನು ಕೋರಿದಲ್ಲಿ, ರಿಜಿಸ್ಟ್ರಿಯು ಅವರಿಗೆ ಹಿಂದಿರುಗಿಸತಕ್ಕದ್ದು.